ಅಧ್ಯಕ್ಷರು: ಅನ್ನದಾನಿಯವರೇ ನಿಮ್ಮದೊಂದು ಪ್ರಶ್ನೆ ಇತ್ತು, ಅದಕ್ಕೆ ಸಹಕಾರ ಸಚಿವರಿಂದ ಉತ್ತರ ಪಡೆಯಿರಿ.

ಡಾ: ಕೆ.ಅನ್ನದಾನಿ: ಸಹಕಾರ ಸಚಿವರು ಇದಕ್ಕೆ ಉತ್ತರಿಸಬೇಕು.

ಅಧ್ಯಕ್ಷರು:– ಮಾನ್ಯ ಸಚಿವರು ಕೇಳಿ. ಅನ್ನದಾನಿಯವರು ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ದಿನಾಂಕ 2.8.2007 ರಂದು ಪ್ರಸ್ತಾಪ ಮಾಡಿದಾಗ ನಾನು ಸೀಟಿನಲ್ಲಿರಲಿಲ್ಲ. ನಾಳೆ ಉತ್ತರಕೊಡಿಸುವುದಾಗಿ ಹೇಳಿದ್ದರಂತೆ. ದಯಮಾಡಿ ತಾವು ಅನ್ನದಾನಿಯವರಿಗೆ ಉತ್ತರ ಕೊಡಿ. ತಮಗೆ ಗೊತ್ತಿದೆಯೇ ನೋಡಿ. ನಾಳೆ ಉತ್ತರ ಕೊಡಿಸುವುದಾಗಿ ಹೇಳಿದ್ದರಂತೆ. ಅದು Co-operative Society ವಿಷಯಕ್ಕೆ ಸಂಬಂಧಪಟ್ಟ ಹಾಗೆ ನೋಡಿ ಉತ್ತರ ಕೊಡಿ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ:–

ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅವ್ಯವಹಾರಗಳ ಬಗ್ಗೆ

ಶ್ರೀ ಜಿ.ಟಿ. ದೇವೆಗೌಡ (ಮಾನ್ಯ ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ವಿಧಾನಸಭಾ ಸದಸ್ಯರಾದ ಡಾ. ಕೆ. ಅನ್ನದಾನಿಯವರ ನಿಯಮ 73ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ಈ ರೀತಿ ಇದೆ.

ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ದಿನಾಂಕ 28.09.1974ರಂದು ನೊಂದಾಯಿಸಲ್ಪಟ್ಟಿರುತ್ತದೆ..

ಈ ಸಂಘದ ಸದಸ್ಯತ್ವ ಕೆಳಗಿನಂತಿದೆ.

ಸದಸ್ಯತ್ವ	ದಿನಾಂಕ 31.03.2006ಕ್ಕೆ	ದಿನಾಂಕ 31.03.2007ಕ್ಕೆ
ಸಾಮಾನ್ಯ ಸದಸ್ಯರು	3163	3163
ಸಹ ಸದಸ್ಯರು	6213	7973

ದಿನಾಂಕ 31.03.2006ಕ್ಕೆ ಸಂಘವು ರೂ.71.21 ಲಕ್ಷಗಳ ಷೇರು ಬಂಡವಾಳವನ್ನು ಹೊಂದಿದ್ದು ಆಪದ್ಧನ ಮತ್ತು ಇತರೆ ನಿಧಿಗಳು ರೂ 7.91 ಲಕ್ಷಗಳು ಇರುತ್ತದೆ. ಸಂಘವು ಕಳೆದ ಮೂರು ವರ್ಷಗಳಲ್ಲಿ ಗಳಿಸಿರುವ ಲಾಭ ನಷ್ಟಗಳು ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಲಾಭ– ನಷ್ಟ
2003–04	+2.01
2004–05	–2.88
2005–06	+18.23

ಇದುವರೆಗೂ ಈ ಸಹಕಾರ ಸಂಘವು 10 ಬಡಾವಣೆಗಳ ನಿರ್ಮಾಣವನ್ನು ಪೂರ್ತಿಗೊಳಿಸಿದ್ದು ಅವುಗಳ ವಿವರ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ		ಬಡಾವಣೆಯ ಹೆಸರು	ನಿವೇಶನಗಳ ಸಂಖ್ಯೆ	ಸ್ಥಳ ವರ್ಷ
01	ಟೆಲಿಕಾಂ ಬಡಾವಣೆ	ಚಿಕ್ಕಲಸಂದ್ರ	35	1975
02	ಟೆಲಿಕಾಂ ಬಡಾವಣೆ	ಟಿಂಬರ್‌ಯಾರ್ಡ್	111	1986
03	ಟೆಲಿಕಾಂ ಬಡಾವಣೆ	ಕೊಡಿಗೆಹಳ್ಳಿ	180	1992
04	ಟೆಲಿಕಾಂ ಬಡಾವಣೆ	ವಿಜಯನಗರ	370	1996
05	ಟೆಲಿಕಾಂ ಬಡಾವಣೆ	ವೆಂಕಟಾಚಲ ಯಲಹಂಕ	55	1995
06	ಟೆಲಿಕಾಂ ಬಡಾವಣೆ	ಅನಂತಪುರ ಯಲಹಂಕ	60	1995

07	ಟೆಲಿಕಾಂ ಬಡಾವಣೆ	ಶ್ರೀರಾಮಪುರ ಮೊದಲನೇ ಹಂತ	422	2002
08	ಟೆಲಿಕಾಂ ಬಡಾವಣೆ	ವಿದ್ಯಾನಗರ ಕ್ರಾಸ್	301	2005
09	ಟೆಲಿಕಾಂ ಬಡಾವಣೆ	ಶ್ರೀರಾಮಪುರ 2ನೇ ಹಂತ	211	2007
10	ಟೆಲಿಕಾಂ ಬಡಾವಣೆ	ಹೆನ್ನೂರು	250	2007
			1995	

ಮೇಲ್ಕಂಡ ಬಡಾವಣೆಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ/ ಸ್ಥಳೀಯ ಸಂಸ್ಥೆಗಳಿಂದ/ ಸ್ಥಳಿಯ ಕಛೇರಿಗಳಿಂದ ಮಂಜೂರಾತಿ ಪಡೆಯಲಾಗಿರುತ್ತದೆ.

ಇವುಗಳಲ್ಲದೆ ಸಂಘವು ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆಗೆ ಸೇರಿರುವ ಚಪ್ಪರಕಲ್ಲು ರಸ್ತೆಯಲ್ಲಿ 3 ಬಡಾವಣೆಗಳ ಯೋಜನೆ ಹಾಕಿಕೊಂಡಿದ್ದು ಮತ್ತು ದೊಡ್ಡಬಳ್ಳಾಪುರ ರಸ್ತೆಯ ರಾಜನಕುಂಟೆ ಗ್ರಾಮದ ಸರಹದ್ದಿಗೆ ಸೇರಿರುವ ಸಾದೇನಹಳ್ಳಿ ಗ್ರಾಮದ ಜಮೀನಿನಲ್ಲಿ ಒಂದು ಬಡಾವಣೆ ಅಲ್ಲದೆ ಬೆಂಗಳೂರು ದಕ್ಷಿಣ, ಸರ್ಜಾಪುರ ಗ್ರಾಮಕ್ಕೆ ಸೇರಿರುವ ಜಮೀನುಗಳಲ್ಲಿ ಬಡಾವಣೆ ರಚಿಸುವುದ್ದೇಶದಿಂದಾಗಿ ರಸಾಶ್ರೀ ಡೆವಲಪರ್ಸ್, ರವಿತೇಜ ಕನ್ಸಟ್ರಕ್ಷನ್ ಮತ್ತು ನಾಗರಾಜ್ ಎಂಬುವರೊಂದಿಗೆ ಕರಾರು ಹೊಂದಿದ್ದು ವಿವರ ಕೆಳಕಂಡಂತೆ ಇರುತ್ತದೆ.

ಬಡಾವಣೆ	ಭೂಪರಿವರ್ತಿತ ಜಮೀನು ಸಂಘದ ಹೆಸರಿಗೆ ನೊಂದಣಿಯಾಗಿರುವುದು		ವ್ಯವಸಾಯ ಜಮೀನು ಭೂ ಪರಿವರ್ತನೆ ಹಂತದಲ್ಲಿದ್ದು ಡೆವಲಪರ್ ಹೆಸರಿನಲ್ಲಿ		ಜಮೀನು ಖರೀದಿಗೆ ಮುಂಗಡ ಹಣ ಡೆವೆಲವರ್ಸ್‌ಗೆ ನೀಡಿರುವುದು	
	ಎಕರೆ	ಗುಂಟೆ	ನೊಂದಣಿ ಯಾಗಿರುವುದು ಎಕರೆ	ಒಪ್ಪಂದ ಕರಾರು ಆಗಿರುವುದು ಗುಂಟೆ	ಎಕರೆ	ಗುಂಟೆ
ಗ್ರೀನ್ ಫೀಲ್ಡ್ ಗಾರ್ಡನ್-1	46	33	15	21	28	35
						}127,75,00,000
ಗ್ರೀನ್ ಫೀಲ್ಡ್ ಗಾರ್ಡನ್	26	26	65	24½	18	23
ಗ್ರೀನ್ ಫೀಲ್ಡ್ ಗಾರ್ಡನ್	22	34½	75	24	–	–
ಗ್ರೀನ್ ಫೀಲ್ಡ್ ಗಾರ್ಡನ್	74	30	27	09	–	–
						45,00,00,000
ಸರ್ಜಾಪುರ	–	42	16	58	–	35,28,00,000
ನಿಸರ್ಗ-1	10	30½	–	–	18	20 3,68,00,000
ನಿಸರ್ಗ-2 –	–	25	20	16	20	3,79,00,000
ಒಟ್ಟು 181	34	251	34½	140	18	215,50,00,000

ಸಂಘದ ಹಣದಿಂದ ಪದಾಧಿಕಾರಿಗಳು ಸೇರಿ ಯಾವುದೇ ನಿರ್ದೇಶಕರ ಹೆಸರಿನಲ್ಲಿ ಭೂಮಿ ಕೊಂಡಿರುವುದಿಲ್ಲ.

ಸಂಘದ ಹೆಸರಿಗೆ ಖರೀದಿಸಿರುವ ಎಲ್ಲಾ ಜಮೀನು ವಾಸಕ್ಕಾಗಿ ಭೂ ಪರಿವರ್ತಿತವಾಗಿರುತ್ತದೆ.

ವಾಸಕ್ಕಾಗಿ ಭೂ ಪರಿವರ್ತಿತವಾಗದ ಜಮೀನು ಸಂಘದ ಡೆವಲಪರ್ಸ್ ಅವರ ವೈಯಕ್ತಿಕ ಹೆಸರಿನಲ್ಲಿಯೇ ಮುಂದುವರೆದಿರುತ್ತದೆ. ಸಂಘದ ಲೆಕ್ಕಪತ್ರಗಳು 2005–06ನೇ ಸಾಲಿನವರೆಗೆ ಲೆಕ್ಕಪರಿಶೋಧನೆಯಾಗಿದ್ದು ಅದರಲ್ಲಿ ಯಾವುದೇ ಹಣ ದುರುಪಯೋಗದ ಬಗ್ಗೆ ಉಲ್ಲೇಖ ಇರುವುದಿಲ್ಲ. ಸಂಘವನ್ನು ಆಡಿಟ್ 'ಬಿ' ದರ್ಜೆಯಲ್ಲಿ ಗುರುತಿಸಲಾಗಿದೆ. ಆಡಿಟ್ ವರದಿಯಲ್ಲಿ ಕೊಡಿಗೆಹಳ್ಳಿ ಬಡಾವಣೆಯ ನೀಲಿನಕ್ಷೆಯನ್ನು ಕೋಡಿಗೆಹಳ್ಳಿ ಪಂಚಾಯಿತಿಯು ಅನುಮೋದಿಸಿದ್ದು ಅನಂತಪುರ ಬಡಾವಣೆಯ ನೀಲಿನಕ್ಷೆಯನ್ನು ಯಲಹಂಕ ಸಿಎಂಸಿ ಅನುಮೋದಿಸಿದ್ದು ಈ ಎರಡೂ ಬಡಾವಣೆಗಳಲ್ಲಿ ಸಾರ್ವಜನಿಕ ಉಪಯೋಗಕ್ಕಾಗಿ ಒದಗಿಸಬೇಕಾದ ನಿವೇಶನಗಳನ್ನು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೊಟ್ಟಿರುವುದಿಲ್ಲ ಎಂದು ನಮೂದಿಸಲಾಗಿದೆ. ಆಡಿಟ್ ರಿಪೋರ್ಟ್‌ನಲ್ಲಿಯೂ ಕೂಡ ಈ ಸಂಘದ ಬಗ್ಗೆ ಯಾವುದೇ ಒಂದು ದೂರುಗಳು, ಪ್ರಕರಣಗಳು ಇರುವುದಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ ಏನಾದರೂ ಕಂಡುಬಂದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

(ಈ ಹಂತದಲ್ಲಿ ಶ್ರೀ ಎನ್.ಯೋಗೀಶ್‌ಭಟ್‌ರವರು ಅಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಡಾ: ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನೆನೋ ಕೊಟ್ಟಿದ್ದಾರೆ. ಆದರೆ ಈ ಸೊಸೈಟಿ ಸುಮರು 10 ಬಡಾವಣೆಗಳನ್ನು ಇಲ್ಲಿಯವರೆಗೆ ನಿರ್ಮಾಣ ಮಾಡಿದೆ. ನಿರ್ಮಾಣ ಮಾಡುವಾಗ ಬಹಳಷ್ಟು ಅವ್ಯವಹಾರಗಳನ್ನು ಹಣಕಾಸಿನಲ್ಲಿಯೂ ಸಹ ಮಾಡಿದ್ದಾರೆ. ಅದರೊಂದಿಗೆ ಸಿ.ಎ. ಸೈಟ್ಸ್ ಮಾಡುತ್ತಾರೆ. ಆ ಸಿ.ಎ. ಸೈಟ್ಸ್ ಮಾಡಿದಂಥ ಸೈಟ್‌ಗಳನ್ನು ವೈಯಕ್ತಿಕವಾಗಿ ಅವರ ಹೆಸರಿನಲ್ಲಿ

ನೊಂದಾಯಿಸಿಕೊಳ್ಳುವುದು. ಆ ಗೃಹ ನಿರ್ಮಾಣ ಸಹಕಾರ ಸಂಘದ ಹೆಸರಿಗೆ ನೊಂದಾಯಿಸದೆ ಆ ಸದಸ್ಯರ ಹೆಸರಿನಲ್ಲಿ ತೆಗೆದುಕೊಂಡಿರುವ ಷೇರು ಬಂಡವಾಳ ಆ ಹಣದಲ್ಲಿ ಇವರು ವೈಯಕ್ತಿಕವಾಗಿ ನಿರ್ದೇಶಕರ ಹೆಸರುಗಳಲ್ಲಿ ಇವತ್ತು ಭೂಮಿಯನ್ನು ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವಂಥ ವ್ಯವಸ್ಥೆ ಆಗುತ್ತಿದೆ. ಇದು ನಮ್ಮ ಗಮನಕ್ಕೆ ಬಂದಿದೆ, ಜೊತೆಗೆ ಇವೆಲ್ಲದರೊಂದಿಗೆ ಇವತ್ತು green belt ಗಳಲ್ಲಿ ನಿವೇಶನಗಳನ್ನು ಮಾಡುತ್ತಿದ್ದಾರೆ. ಅಲ್ಲಿ ನಿವೇಶಗಳನ್ನು ಮಾಡುವುದಕ್ಕೆ ಯಾವುದೇ ರೀತಿ ಅನುಮತಿ ಸರ್ಕಾರದಿಂದ ಇಲ್ಲ. ಹಾಗೆ ಅನುಮತಿ ಸರ್ಕಾರದಿಂದ ಇಲ್ಲದಿದ್ದರೂ ಕೂಡ ಅಲ್ಲಿ ಈ ನಮ್ಮ ಸಂಘದ ಸದಸ್ಯರಿಗೆ green belt ಗಳಲ್ಲಿ ನಿವೇಶನಗಳನ್ನು ಮಾಡಿ, bogus ಖಾತೆಗಳನ್ನು ಮಾಡಿ ಅಲ್ಲಿ ಕೂಡ ಬೋಗಸ್, ಸುಳ್ಳು betterment charges ಅನ್ನು ಕೂಡ ಮಾಡಿ ಎಲ್ಲಾ ರೀತಿಯಲ್ಲಿಯೂ ಅವ್ಯವಹಾರಗಳನ್ನು ಮಾಡುತ್ತಿದ್ದಾರೆ. ಇದು ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ದುಡ್ಡು ಮಾಡಿಕೊಳ್ಳಲು ಒಂದು ದಂಧೆ ಮಾಡಿಕೊಂಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ವಿಜಯನಗರದಲ್ಲಿ 1996ರಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡಿದ್ದಾರೆ. ಅಲ್ಲಿ ಪರಿಶಿಷ್ಟ ಜಾತಿಯವರಿಗೆ ಸೈಟ್ಸ್ ಕೊಟ್ಟಿಲ್ಲ. ಸಹಕಾರ ಸಂಘಗಳಲ್ಲಿ ಇಷ್ಟು ಸೈಟ್ಸ್ ಅನ್ನು SC/ST ಜನಾಂಗಕ್ಕೆ ಮೀಸಲು ಇಟ್ಟುಕೊಡಬೇಕೆಂದಿದೆ. ಒಂದೇ ಒಂದು ಸೈಟ್ ಅನ್ನೂ ಸಹ ವಿಜಯನಗರ ಬಡಾವಣೆಯಲ್ಲಿ ಆ ಜನಾಂಗಕ್ಕೆ ಕೊಟ್ಟಿಲ್ಲ. ಇವತ್ತು 6,000–7,000 ರೂ.ಗಳಿಗೆ ಬೆಲೆ ಬಾಳುವಂಥ ಕೆಲವು ಸೈಟ್ಸ್ ಅನ್ನು ಅವತ್ತಿನಿಂದ ಇವತ್ತಿನವರೆಗೆ ಇವರು ಹಾಗೆ ಉಳಿಸಿಕೊಂಡು ಬಂದು ಇವತ್ತು ಬೇರೆಯವರ ಹೆಸರಿಗೆ ಮಾರಿಕೊಳ್ಳುತ್ತಿದ್ದಾರೆ. ಸದಸ್ಯರಿಗೂ ಕೂಡ ಕೊಡುತ್ತಿಲ್ಲ. ಹಾಗಾಗಿ ಇವತ್ತು SC/ST ಜನಾಂಗದವರಿಗೆ ಎಷ್ಟೊಂದು ಅನ್ಯಾಯ ಮಾಡುತ್ತಿದ್ದಾರೆಂದರೆ, ಅವರಿಗೆ ಆ ಲೇಔಟ್‌ನಲ್ಲಿ ಸೈಟ್ಸ್ ಅನ್ನು ಕೊಟ್ಟಿಲ್ಲ. ಅದರೊಂದಿಗೆ ಸುಮಾರು ಈ Telecom Employees society ಯಲ್ಲಿ 5% ಮಾತ್ರ ನಿವೇಶನಗಳನ್ನು ನಮ್ಮ ಸದಸ್ಯರಿಗೆ ಕೊಡುತ್ತಿದ್ದಾರೆ. ಇನ್ನು 90% ನವೇಶನಗಳನ್ನು ಬೇರೆಯವರಿಗೆ ಮಾರಾಟ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ ಇವತ್ತು ಏನೇನು ನಡೆದಿದೆ, ಈ ಎಲ್ಲಾ ಅವ್ಯವಹಾರಗಳನ್ನು ತನಿಖೆ ಮಾಡಿಸಿ, ಸರಿಯಾದ ರೀತಿಯಲ್ಲಿ SC/ST ಜನಾಂಗದವರಿಗೆ ಸರಿಯಾದ

ರೀತಿಯಲ್ಲಿ ಈ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ನಿವೇಶನಗಳನ್ನು ಕೊಡುತ್ತಿದ್ದಾರೆಯೇ ಎಂಬ ಬಗ್ಗೆ ಕೂಡ ತನಿಖೆ ಮಾಡಿಸಬೇಕು. ಆ ರೀತಿ ತನಿಖೆ ಮಾಡಿಸಿದ ಕೂಡಲೇ ತಪ್ಪಿತಸ್ಥರ ವಿರುದ್ಧ ಕ್ರಮ ತಗೆದುಕೊಳ್ಳಬೇಕು. ಈ ರೀತಿ ತಪ್ಪು ಮಾಡಿರುವುದರಿಂದ ಈ ಸೊಸೈಟಿಯನ್ನು supercede ಮಾಡಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜಿ.ಟಿ.ದೇವೇಗೌಡ: ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಸದಸ್ಯರು ಕೇಳುತ್ತಿರುವಂತೆ ವಿಜಯನಗರ ಬಡಾವಣೆಯ ಜಮೀನು ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿವೆ. SC/ST ಜನಾಂಗದವರಿಗೆ ನಿವೇಶನ ಹಂಚಿಕೆ ಸಂಬಂಧ, ಸಂಘದ ವಿರುದ್ಧ ವ್ಯಾಜ್ಯಗಳು ಕೂಡ ದಾಖಲಾಗಿವೆ. ಇವತ್ತು ಈ ಒಂದು ಸಂಘ ಉತ್ತಮವಾದಂಥ ಕೆಲಸವನ್ನು ಮಾಡುತ್ತಿದೆ ಎಂಬ ವರದಿಯನ್ನು ಆಡಿಟ್‌ನವರು 2005-06ನೇ ಸಾಲಿನಲ್ಲಿಯೂ ಕೂಡ ಕೊಟ್ಟಿದ್ದಾತೆ. ಸಂಘದಲ್ಲಿ ಹಣ ದುರುಪಯೋಗ ಆಗಿರುವ ಪ್ರಕರಣಗಳು ಯಾವುದು ಇರುವುದಿಲ್ಲವೆಂದು ವರದಿ ಕೊಟ್ಟಿದ್ದಾರೆ. ಈಗ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವಂತೆ ಈ ಬಗ್ಗೆ ನಮ್ಮ ಇಲಾಖಾದಿಕಾರಿಗಳಿಂದ ತನಿಖೆಯನ್ನು ಮಾಡಿಸಿ, ವರದಿ ತರಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇನೆ.

ಛೇರ್ಮನ್:- (ಅ) ಶ್ರೀ ಬಸವರಾಜ್ ರಾಯರೆಡ್ಡಿ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆಯ 9(64)ಕ್ಕೆ ನೀಡಿರುವ ಉತ್ತರಕ್ಕೆ ಸಂಬಂಧಿಸಿದಂತೆ ಮುಂದುವರಿದ ಚರ್ಚೆ.

(ಇ) ನೇತ್ರಾವತಿ ತಿರುವು ಯೋಜನೆಯ ಅಧ್ಯಯನ ಮಾಹಿತಿ ಕುರಿತಂತೆ ಶ್ರೀ ಬಿ. ಶಿವರಾಮು ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖೆಯ 120 (999)ಕ್ಕೆ ನೀಡಿರುವ ಉತ್ತರಕ್ಕೆ ಸಂಬಂಧಿಸಿದಂತೆ ಮುಂದುವರಿದ ಚರ್ಚೆ.